ಕರಗಿ ಕೆಂಪಾಗಿತ್ತು. ಇಪ್ಪತ್ತೈದು ನಿಮಿಷದ ಏರು ತಗ್ಗಿನ ರಸ್ತೆಯ ಪ್ರಯಾಣದ ಅನಂತರ ನಾವು ಇಳಿಯುವ ಜಾಗ ಬಂತು. ಇಳಿಯುವ ಮುನ್ನ ದೊಡ್ಡವ್ವ, ನನ್ನ ತಲೆಕೂದಲನ್ನು ಸರಿ ಮಾಡುವ, ಬಸ್ಸಿನ ಪ್ರಯಾಣದಲ್ಲಿ ಅಲ್ಪ ಸ್ವಲ್ಪವೇ ಬಿಚ್ಚಿದಂತಿದ್ದ ನನ್ನ ಸೀರೆಯನ್ನು ಸರಿ ಮಾಡುವ ಕಾರ್ಯದಲ್ಲಿ ತೊಡಗಿದ್ದಳು. ಗಾಡಿಯಿಂದ ಕೆಳಗಿಳಿಯುತ್ತಿದ್ದಂತೆ, ಮನೆಯ ಮುಂದೆ ನಿಂತಿದ್ದ ಅನೇಕ ಕಣ್ಣುಗಳು ನನ್ನನ್ನೇ ನೋಡುತ್ತಿರುವ ಅನುಭವವಾಗಿ ತಲೆ ತಗ್ಗಿಸಿದೆ. ಹೃದಯದ ಬಡಿತಕ್ಕೆ ಕೈಯಲ್ಲಿದ್ದ ಚೀಲ ಇನ್ನೇನು ಜಾರಿ ಕೆಳಗೆ ಬೀಳುವುದರಲ್ಲಿತ್ತು. ಸಾವರಿಸಿಕೊಂಡು ದೊಡ್ಡವ್ವನ ಕೈ ಹಿಡಿದು, ''ನಾನ್ ಮದಿಗ್ ಬರಂಗಿಲ್ಲ, ವಾಪಸ್ ಊರ್ ಬಸ್ ಹತ್ತಿಸ್ ಬಿಡು'' ಎಂದು ಪಿಸುಗುಟ್ಟಿದೆ. ''ತಲೆ ಗಿಲೆ ಕೆಟ್ಟೈತೆನು ನಿನಗ? ನಿನ್ ಮದಿಗೆ ನೀನೇ ಬರಂಗಿಲ್ಲ ಅಂದ್ರೆ ಮದ್ವಿ ಹೆಂಗ್ ಆಯ್ತೈತ್ತಿ?'' ಎಂಬ ಮಾತು ಸೀದಾ ಎದೆಗಿಳಿಯಿತು. ಇಷ್ಟು ಹೊತ್ತು ಆತಂಕದಿಂದಲೇ ಇದ್ದ ನಾನು ಈಗ ಪೂರ್ತಿ ನೆಲಕ್ಕೆ ಕುಸಿದಿದ್ದೆ. ಯಾರು ನನಗೆ ಮುಖದ ಮೇಲೆ ನೀರು ಚಿಮುಕಿಸಿದರೋ, ಯಾರು ಕೈ ಹಿಡಿದು ನಡೆಸಿಕೊಂಡು ಬಂದರೋ ಒಂದೂ ತಿಳಿಯಲಿಲ್ಲ.

ಮೊಣಕಾಲಮೇಲೆ ತಲೆಯಿಟ್ಟು ನಿದ್ರಾವಸ್ಥೆಯ ಸ್ಥಿತಿಯಲ್ಲಿ ಎಷ್ಟು ಹೊತ್ತು ಕಳೆದೆನೋ ತಿಳಿಯಲಿಲ್ಲ. ಕಣ್ಣು ಬಿಟ್ಟು ಪ್ರಜ್ಞೆ ತಿಳಿಯಾದಾಗ ದೊಡ್ಡವ್ವ ಯಾರ ಹತ್ತಿರವೋ ಹೇಳುತ್ತಿದ್ದುದು ಕೇಳಿಸುತ್ತಿತ್ತು. ''ಆಕಿಗ್ ಪ್ರಯಾಣ ಆಗಂಗಿಲ್ರಿ, ದಾರಿಗುಂಟ ವಾಂತಿ ಮಾಡ್ಕೋತ ಬಂದು ಮೂರ್ಛೆ ತಪ್ ಬಿದ್ದಾಳ್ರಿ.'' ಅದೆಲ್ಲಾ ಕೇಳಿಸಿಕೊಳ್ಳುತ್ತಿದ್ದ ಮುದಿ ಜೀವವೊಂದು ಮಾತು ಮುಗಿಸಿ ಕೋಣೆ ಪ್ರವೇಶಿಸಿದ ಕೂಡಲೇ ಕಷ್ಟಪಟ್ಟು ಮೇಲೆದ್ದು ನಿಂತೆ. ಈಗ ಹೇಗಿದ್ದೀಯ ಎನ್ನುವುದರಿಂದ ಮಾತು ಶುರು ಮಾಡಿದ ಆ ಹೆಂಗಸು, ಕೊನೆಯಲ್ಲಿ ಊಟಕ್ಕೆ ಬನ್ನಿ ಎಂದು ಎದ್ದು ಹೊರನಡೆದರು. ಕಿವಿಯ ತನಕ ಬಂದ ಮಾತುಗಳು ಯಾವುದೂ ಒಳ ಪ್ರವೇಶಿಸಿರಲಿಲ್ಲ. ಹೆಂಗಸು ಹೊರ ಹೋಗುವುದನ್ನೇ ಕಾಯುತ್ತಿದ್ದ ದೊಡ್ಡವ್ವ, ಬೈಗುಳದ ಜೊತೆಗೆ ಒಳಬಂದಳು. ಮಾತಾಡಲೂ ತ್ರಾಣವಿಲ್ಲದ ನಾನು, ಹೊರಗೆ ಕೇಳುವಷ್ಟು ದೊಡ್ಡದಲ್ಲದಿದ್ದರೂ, ದೊಡ್ಡವ್ವನಿಗೆ ಕೇಳುವಷ್ಟು ದೊಡ್ಡದಾಗಿಯೇ ಜಗಳವಾಡಿದ್ದೆ. ''ಬೇರ್ಯೋರ್ ಮದಿಗೆಂದು ಕರ್ಕಂಡ್ ಬಂದು, ಈಗ ಮೋಸಮಾಡಾಕ್ ಹತ್ತಿಯಲ್ಲೇ... ದ್ಯಾವ್ರು ನಿನಗ ಒಳ್ಳೇದ್ ಮಾಡಾಕಿಲ್ಲ. ಅವ್ವಗ್ ಗೊತ್ತಾದ್ರ ನಿನ್ ಸುಮ್ನೆ ಬಿಡಂಗಿಲ್ಲ'' ಎಂದು ಕಿರುಚಿದೆ. ಕೊನೆಯಲ್ಲಿ ದೊಡ್ಡವ್ವ, ''ನಿಮ್ಮವ್ವನೆ ಕಳಿಸಿ ಕೊಟ್ಟಾಳ, ದುಡ್ಡೂ ತಗಂಡಾಳ. ಮೊದ್ಲೇ ಗೊತ್ತಾದ್ರ ರಂಪ ಮಾಡಾಕಿ ನೀನು ಅಂತಾ ಮೊದ್ಲೇ ಏಳ್ಬೇಡ ಅಂತಾನೂ ಹೇಳ್ಯಾಳ'' ಎಂದಾಗ ಮತ್ತೆ ಕಾಲಕೆಳಗಿನ ನೆಲ ಕುಸಿದಂತಾಯಿತು. ಇವತ್ತಿನ ಸನ್ನಿವೇಶಗಳೆಲ್ಲ ಇದಕ್ಕೆ ಪೂರಕವಾಗಿದ್ದರಿಂದ ಆ ಸತ್ಯ ಬೇಗ ಜೀರ್ಣವೂ ಆಯಿತು. ಹದಿನಾರರ ಹುಡುಗಿ ಹದಿನೆಂಟಾಗಿದ್ದಕ್ಕೆ ಕಾರಣ ಈಗ ಸ್ಪಷ್ಟವಾಗಿತ್ತು. ಮುಖ ನೆನಪಿಲ್ಲದ ತಂದೆಯ ಮೇಲೂ, ಮುಖವನ್ನು ಅಡಗಿಸುತ್ತ ರಸ್ತೆಯಲ್ಲಿ ನಡೆದು ಹೋದ ಅವ್ವನ ಮೇಲೂ ಭಯಂಕರ ಸಿಟ್ಟು ಬಂತು. ಯಾವುದೇ ಮಾಹಿತಿ ನೀಡದೆ ಮನೆಯಿಂದ ಹೊರ ನೂಕಿದ್ದ ಅವ್ವನನ್ನು ನಿರ್ದಾಕ್ಷಿಣ್ಯವಾಗಿ ಮನಸ್ಸಿನಿಂದ ಬಹಿಷ್ಕರಿಸಿದೆ. ಕಾರಣವೆ ಇಲ್ಲದೆ ನಮ್ಮವರಿಂದ, ಊರಿಂದ ತಿರಸ್ಕೃತಳಾದ ನನಗೆ, ಈ ಮದುವೆಯನ್ನು ಒಪ್ಪದೆ ಬೇರೆ ದಾರಿ ಕಾಣಲಿಲ್ಲ. ಗೊತ್ತಿಲ್ಲದ ಊರು, ಗೊತ್ತಿಲ್ಲದ ಜನ, ಗೊತ್ತಿಲ್ಲದ ಭಾಷೆಯ ಮುಂದೆ ಸಂಪೂರ್ಣ ಸೋತಿದ್ದೆ. ಹದಿನಾರು ವರ್ಷದ ಬುದ್ಧಿಗೆ ಇದರ ಹೊರತಾಗಿ ಏನಾದರೂ ಮಾಡಬಹುದೆಂದು ತೋಚಲಿಲ್ಲ. ತಲೆತಗ್ಗಿಸಿ ದೊಡ್ಡವ್ವನ ಜೊತೆ ಊಟಕ್ಕೆ ಹೊರಟ ನನಗೆ ಈಗ ಎಲ್ಲ ಸ್ಪಷ್ಟವಾಗುತ್ತಿತ್ತು. ದೊಡ್ಡಮನೆಯನ್ನು ಮದುವೆ ಮನೆಯಂತೆ ಅಲಂಕರಿಸಿದ್ದರು. ಅಲ್ಲಲ್ಲಿ ಜನ ಗುಂಪಾಗಿ ನಿಂತು ನಮ್ಮನ್ನೇ ನೋಡುತ್ತಿದ್ದರು. ಅಂಥ ಘನಘೋರ ಹಸಿವೆಯಲ್ಲೂ ಹೊಸ ಬಗೆಯ ಊಟ ಎರಡು ತುತ್ತಿಗಿಂತ ಹೆಚ್ಚಿಗೆ ಇಳಿಯಲಿಲ್ಲ. ಇನ್ನೇನು ಊಟ ಮುಗಿಸಿ ಏಳಬೇಕೆನ್ನುವ ಹೊತ್ತಿನಲ್ಲಿ, ಕೈಯಲ್ಲಿ ಪಾತ್ರೆ ಹಿಡಿದು